ದಿನಾಂಕಃ **24-09-2021** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು**.**

## ಮುಂದುವರೆದ ಮುಖ್ಯ ವಿಚಾರಣೆಃಅರ್ಜಿದಾರರ ಪರ ವಕೀಲರಿಂದಃ

ಕಲಂ 4 ಉಪಕಲಂ 1 ರಡಿಯಲ್ಲಿ ಹೊರಡಿಸಲಾದ ನೋಟಿಫಿಕೇಷನ್, ಕೊಡುಗೆಯ ಮುಖಪುಟ, ರಾಜ್ಯಪತ್ರ, ದಿಃ12/1/2011 ರ ಜಿಲ್ಲಾಧಿಕಾರಿ, ಚಿಕ್ಕಮಗಳೂರು ರವರು ಹೊರಡಿಸಿದ ರದ್ದತಿ ಅಧಿಸೂಚನೆ, ಅಂತಿಮ ಅವಾರ್ಡ್ ನೋಟೀಸನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಅವುಗಳನ್ನು ಕ್ರಮವಾಗಿ ನಿಪಿ-40 ರಿಂದ 44 ಎಂದು ಗುರುತಿಸಲಾಯ್ತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**-**

ನಾನು ಮುಖ್ಯ ವಿಚಾರಣೆಯಲ್ಲಿ 12 ಎಕರೆ ಬಾಗಾಯ್ತು ಅಂತ ಹೇಳಿದ್ದೇನೆ. ನಮ್ಮ ತಂದೆ 10 ಎಕರೆ ಭಾಗಾಯ್ತು ಅಂತ ಹೇಳಿದ್ದಾರೆಂದರೆ ಇರಬಹುದು. 12 ವರ್ಷದ ಅಡಿಕೆ ಮರಗಳು ನಮ್ಮ ಭೂಮಿಯಲ್ಲಿ ಇರಲಿಲ್ಲವೆಂದರೆ ಸರಿಯಲ್ಲ. ಇದೇ ಮೊದಲ ಬಾರಿಗೆ ಈ ವಿಚಾರ ಹೇಳುತ್ತಿದ್ದೇನೆಂದರೆ ಸರಿಯಲ್ಲ. 3 ಎಕರೆ 25 ಗುಂಟೆ ಭಧ್ರಾ ಮೇಲ್ದಂಡೆ ಯೋಜನೆಗೆ ಸ್ವಾಧೀನವಾಗಿರುತ್ತದೆ. ನಮ್ಮ ಜಮೀನು ಖುಷ್ಕಿ ಆಗಿರುತ್ತದೆಂದರೆ ಸರಿಯಲ್ಲ. ಸಾಕ್ಷಿ ಅಡಿಕೆ ತೋಟ ಇರುತ್ತದೆನ್ನುತ್ತಾರೆ. ಅವಾರ್ಡ್ ನೋಟೀಸು ಕೊಟ್ಟ 2 ವಾರಕ್ಕೆ ನಮ್ಮ ತಂದೆ ಸದರಿ ನೋಟೀಸಿಗೆ ತಕರಾರು ಸಲ್ಲಿಸಿರುತ್ತಾರೆ. ನಮ್ಮ ತಂದೆ ಯಾರಿಂದ ಜಮೀನು ಕೊಂಡುಕೊಂಡರೆಂದು ನನಗೆ ಗೊತ್ತಿಲ್ಲ. ಅದನ್ನು ನಾವು ಖರೀದಿ ಮಾಡಿರುತ್ತೇವೆ. ಆದರೆ ಮಂಜೂರಾದ ಜಾಗವಾಗಿರುವುದಿಲ್ಲ. 3 ಲಕ್ಷ ರೂ. ಸಮತಟ್ಟು ಮಾಡಲು ಖರ್ಚು ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ವಾರ್ಷಿಕವಾಗಿ 3 ಲಕ್ಷ ರೂ. ನಷ್ಟವಾಗಿದೆ ಅಂತ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾನಲ್ ನಮ್ಮ ಆಸ್ತಿ ಮಧ್ಯ ಭಾಗದಲ್ಲಿ ಹಾದು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ನಕ್ಷೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ತಂತಿಬೇಲಿಗೆ 10 ಲಕ್ಷ ರೂ. ಖರ್ಚಾಗಿಲ್ಲವೆಂದರೆ ಸರಿಯಲ್ಲ. ಉಳಿದ ಜಮೀನಿನಲ್ಲೂ ಕೂಡಾ ಈಗ ಅಡಿಕೆ ಇರುತ್ತದೆ. ಉಳಿದ ಜಮೀನು ನಾನು ಹಾಳಾಗಿದೆ ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆಂದರೆ ಸರಿಯಲ್ಲ. ಸ್ವಾದೀನಪಡಿಸಿಕೊಂಡ 3 ಎಕರೆಯಲಿಲ ಕೊಳವೆ ಬಾವಿ ಇತ್ತು. ಅದನ್ನು ಯಾವಾಗ ತೆಗೆಸಿದ್ದು ಎಂದು ಗೊತ್ತಿಲ್ಲ. ಸಾಕ್ಷಿ ಪೋಟೋವನ್ನು ತೆಗೆದುಕೊಂಡಾಗಲೇ ತೆಗೆಸಿದ್ದು ಅನ್ನುತ್ತಾರೆ. ಭೂ ಸ್ವಾದೀನಪಡಿಸಿಕೊಂಡ ಜಮೀನಿನಲ್ಲಿ ಕೊಳವೆ ಬಾವಿ ಇತ್ತು ಎಂದರೆ ಸರಿಯಲ್ಲ. ಕಟ್ಟಡ ಕೂಡಾ ಇರಲಿಲ್ಲ ಎಂದರೆ ಸರಿಯಲ್ಲ. ಸಿಲ್ವರ್, ಟೀಕ್ ಮುಂತಾದ ತೋಟಗಾರಿಕೆ ಮರಗಳು ಸುಮಾರು 2800 ಗಿಡ ಇರಲಿಲ್ಲವೆಂದರೆ ಸರಿಯಲ್ಲ. ನಮ್ಮ ತಂದೆ ಮುಖ್ಯ ವಿಚಾರಣೆಯಲ್ಲಿ 1960 ರೂ. ಗಿಡ ಇದ್ದವೆಂದು ಹೇಳಿದ್ದಾರೆಂದರೆ ನನಗೆ ಗೊತ್ತಿಲ್ಲ. ಹೆಚ್ಚಿಗೆ ಪರಿಹಾರ ಪಡೆಯಲು ಸೃಷ್ಟಿ ಮಾಡಿ ಹೇಳಿದ್ದೇನೆಂದರೆ

ಸರಿಯಲ್ಲ. 10,36,262/- ರೂ. ಪರಿಹಾರ ಕೊಟ್ಟಿದ್ದಾರೆಂದರೆ ಸರಿ. ವೈಜ್ಞಾನಿಕವಾಗಿ ಸಂಬಂದಪಟ್ಟ ಅಧಿಕಾರಗಳು ಮೌಲ್ಯಮಾಪನ ಮಾಡಿದ ಆದಾರದ ಮೇಲೆ ಪರಿಹಾರ ಕೊಟ್ಟಿದ್ದಾರೆಂದರೆ ಸರಿಯಲ್ಲ. ಈ ಹಣಕ್ಕಿಂತ ಹೆಚ್ಚಿಗೆ ಪರಿಹಾರ ಬರಬೇಕಿತ್ತು ಎಂಬ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಕೃಷಿಯೇತರ ಉದ್ದೇಶಕ್ಕೆ ಬದಲಾಯಿಸಿ ಮಾರಾಟ ಮಾಡಿದ್ದರೆ 50 ರೂ. ಚದುರ ಅಡಿಗೆ ಮಾರಾಟ ಬಹುದಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ1 ರಿಂದ 3 ಈ ಪ್ರಕರಣ 4(1) ಅಧಿಸೂಚನೆ ನೀಡಿದ ನಂತರ ಬಂದ ದಾಖಲೆಗಳೆಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣ 4(1) ನೋಟಿಫೀಕೇಷನ್ 22/3/2010 ರಲ್ಲಿ ಆಗಿದೆ ಎಂದರೆ ಇರಬಹುದು. ಸದರಿ ದಾಖಲೆಗಳನ್ನು ನಾನು ಗ್ರಾಮ ಲೆಕ್ಕಾಧಿಕಾರಿಗಳ ಜೊತೆ ಶಾಮೀಲಾಗಿ ಸೃಷ್ಟಿ ಮಾಡಿದ್ದೇನೆಂದರೆ ಸರಿಯಲ್ಲ. ನಿಪಿ-4 ನಮ್ಮ ಪ್ರಕರಣಕ್ಕೆ ಸಂಬಂದಪಟ್ಟಿಲ್ಲ ಎಂದರೆ ಸರಿಯಲ್ಲ.

ನಿಪಿ-5 ಕೂಡಾ ನಮ್ಮ ಅಸ್ತಿಗೆ ಸಂಬಂದಿಸಿದ್ದು ಎಂದರೆ ಸರಿ. ಅದರಲ್ಲಿ ನೀರಾವರಿ ಮಳೆ ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ. ನಿಪಿ-6 ರಲ್ಲಿ ಬೆಳೆಯ ಉಲ್ಲೇಖ ಇಲ್ಲವೆಂದರೆ ನನಗೆ ಗೊತ್ತಿಲ್ಲ. ನಿಪಿ8 ನ್ನು ಗ್ರಾಮ ಲೆಕ್ಕಾಧಿಕಾರಿಗಳು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸದರಿ ದಾಖಲಾತಿ ಕೂಡಾ ಈ ಪ್ರಕರಣ 4(1) ಸೂಚಿಸಲಾದ ಅಧಿಸೂಚನೆ ಹೊರಡಿಸಿದ ನಂತರ ಬಂದ ದಾಖಲೆ ಎಂದರೆ ಸರಿಯಲ್ಲ. ನಿಪಿ-9 ರಿಂದ 33, 36 ರಿಂದ 39 ರ ದಾಖಲೆಗಳು 2013 ರ ನಂತರ ಹೊಸ ಅಧಿನಿಯಮದಡಿಯಲ್ಲಿ ಹೊರಡಿಸಿದ ನೊಟಿಫಿಕೇಷನ್ ಗಳೆಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗಳ 4(1) ನೊಟಿಫಿಕೇಷನ್ ಸ್ಥಳ, ಮಣ್ಣಿನ ಸ್ವರೂಪ, ಕಾಯ್ದೆ ವಿಬಿನ್ನವಾಗಿರುತ್ತವೆಂದರೆ ಸರಿಯಲ್ಲ. ಆ ಕಾರಣ ಅದಕ್ಕೂ ಈ ಪ್ರಕರಣಕ್ಕೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಕೆಂಚಿಕೊಪ್ಪ, ಉಪ್ಪಾರಬೀರನಹಳ್ಳಿಯಲ್ಲಿ ಸ್ವಾದೀನಗೊಂಡಿರುವ ಭೂಮಿಗಳು ಖುಷ್ಕಿ ಜಮೀನುಗಳಾಗಿರುತ್ತವೆಂದರೆ ಸರಿಯಲ್ಲ. ಆದ್ದರಿಂದ ನಾವು ಹೆಚ್ಚಿನ ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

(1 ನೇ ಎದುರುದಾರರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ)
ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

Sd/-
(ಎಂ ಸಿ ನಂಜೇಗೌಡ)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.